ಸರಿಸಿದ. ನಾವು ಪರಸ್ಪರ ಕೈಹಿಡಿದುಕೊಂಡು ಎಲ್ಲಿ ಏನಿದೆ ಎಂದು ಗೊತ್ತಾಗದೆ ತಡವರಿಸುತ್ತ ತಡವರಿಸುತ್ತ ಕೊನೆಗೂ ಎರಡು ಸೀಟುಗಳನ್ನು ಹುಡುಕಿ ಕೂತುಕೊಳ್ಳುವುದಕ್ಕೂ ಬೆಳ್ಳಿತೆರೆ ಧಗ್ಗೆಂದು ಹೊತ್ತಿಕೊಂಡಂತೆ ಬೆಳಗುವುದಕ್ಕೂ ಸರಿಹೋಯಿತು. 'ಘೋರ ರಾತ್ರಿ'. ದೆವ್ವದ ಕಥೆಯೋ ಏನೋ ಎಂದು ಗೊಣಗಿದರು ಧನಂಜಯ.

ನಾವು ಕೂತಿದ್ದ ಹಿಂದಿನ ಗೋಡೆಯ ಮೇಲುಭಾಗದಲ್ಲಿ ಒಂದು ಪುಟ್ಟ ಕಿಟಕಿಯಿಂದ ಧೂಮಕೇತುವಿನ ಹಾಗೆ ನುಗ್ಗಿಬಂದ ಬೆಳಕಿನ ಪುಂಜ ಬೆಳ್ಳಿತೆರೆಯನ್ನು ಆಲಿಂಗಿಸಿಕೊಳ್ಳತೊಡಗಿದಂತೆ ನಾನು ಅದಕ್ಕೇ ಕಣ್ಣು ನೆಟ್ಟೆ. ಮುಂದೆ ಕೆಲವೇ ಕ್ಷಣಗಳಲ್ಲಿ ನನಗೆ ಅದೊಂದು ಕಪ್ಪು-ಬಿಳುಪು ಸಿನಿಮಾವೆಂದು ತಿಳಿಯಿತು. ಎಷ್ಟೋ ವರ್ಷಗಳ ನಂತರ ಒಂದು ಥಿಯೇಟರಿನಲ್ಲಿ ಕೂತು ಕಪ್ಪು-ಬಿಳುಪು ಸಿನಿಮಾ ನೋಡುವುದೇ ಒಂದು ಖುಷಿ. ಹಳೆಗಾಲದ ಪೋಷಾಕುಗಳನ್ನು ತೊಟ್ಟುಕೊಂಡಿದ್ದ ನಟನಟಿಯರು ಒಬ್ಬರಾದ ಮೇಲೊಬ್ಬರಂತೆ ಕಾಣಿಸಿಕೊಳ್ಳತೊಡಗಿದಾಗ ಒಮ್ಮೊಮ್ಮೆ ಕೆಲವು ಶಾಟುಗಳು ಮೇಲುಕೆಳಗಾಗುತ್ತಿದ್ದವು. ಅದರ ಪರಿಣಾಮವಾಗಿ ಯಾವುದೋ ಧಾವಂತದಿಂದ ನಡೆಯುತ್ತಿದ್ದ ಕೆಲವರು ನಟನಟಿಯರು ಹಾಗೆ ನಡೆಯುತ್ತಿರುವಾಗಲೇ ಒಮ್ಮೊಮ್ಮೆ ಮೇಲೆ ಪುಟಿಯುತ್ತಿದ್ದರು. ಪ್ರತಿಯೊಂದು ಶಾಟಿನ ತುಂಬ ಎಷ್ಟೊಂದು ಲಂಬ ಗೆರೆಗಳಿದ್ದವೆಂದರೆ ಇಡೀ ಸಿನಿಮಾವನ್ನು ಧಾರಾಕಾರ ಮಳೆ ಸುರಿಯುತ್ತಿದ್ದಾಗಲೇ ಚಿತ್ರೀಕರಿಸಿರಬೇಕೆಂದು ಅನ್ನಿಸಿದ್ದುಂಟು.

ನನ್ನ ಕಣ್ಣು ಪಾತ್ರವರ್ಗದ ಹೆಸರುಗಳನ್ನು ಓದುತ್ತಿತ್ತು. ಕೆಲವೇ ಕ್ಷಣಗಳಲ್ಲಿ ಆ ಹೆಸರುಗಳು ಜೋರಾಗಿ ಮಳೆ ಸುರಿಯುವ ಸದ್ದಿನೊಳಗೆ ಕರಗಿ ಹೋದದ್ದೇ ಸ್ವಲ್ಪ ದೂರದಲ್ಲಿ ಬರುಬರುತ್ತ ಕ್ಯಾಮೆರಾ ಕಣ್ಣು ಆಕಾಶದಿಂದ ಕೆಳಕ್ಕಿಳಿದು ಒಂದು ಮನೆಯನ್ನು ತನ್ನ ದೃಷ್ಟಿಯಲ್ಲಿರಿಸಿಕೊಂಡಿತು. 'ಇದು ಗೊತ್ತಾ, ಡಾಲಿ ಶಾಟ್. ಆ ಕಾಲದಲ್ಲಿ ನಾನೂ ಆಗಾಗ ಇಂಥ ಶಾಟ್ ತೆಗೆದವನೇ' ಎಂದರು ಧನಂಜಯ.

ಸಿನಿಮಾದ ನಾಯಕಿ ಕಮಲಾಕ್ಷಿ. ನಾನು ಹಿಂದೆಂದೋ ಪತ್ರಿಕೆಗಳಲ್ಲಿ ನೋಡಿದ್ದ ಕೆಲವು ಫೋಟೊಗಳನ್ನು ನೆನಪಿಸಿಕೊಂಡು ಆಕೆಯನ್ನು ನಂದಿನಿ ಎಂದು ಗುರುತಿಸಿದೆ. ಆಕೆ ಏಳೆಂಟು ಚಿತ್ರಗಳಲ್ಲಿ ಅಭಿನಯಿಸಿ ಸ್ವಲ್ಪಮಟ್ಟಿಗೆ ಹೆಸರೂ ಮಾಡಿದ್ದಳು. ಆದರೂ ಅವಳೊಂದು ದಿನ ಆತ್ಮಹತ್ಯೆ ಮಾಡಿಕೊಂಡಳೆಂದು ವರದಿ ಮಾಡಿದ್ದವು ಕೆಲವು ಪತ್ರಿಕೆಗಳು.

ಬಿಳಿಗೋಡೆಯ ಮೇಲಿನ ಚಿತ್ರಪಟದಲ್ಲಿ ಹರಿಯುತ್ತಿರುವ ಒಂದು ನದಿ. ಅದರ ಎರಡೂ ದಡಗಳಲ್ಲಿ ಎತ್ತರಕ್ಕೆ ಬೆಳೆದ ಮರಗಳು. ವಿಶಾಲವಾದ ಹಾಲಿನಲ್ಲಿ ಟೀಪಾಯಿಯ ನಾಲ್ಕು ಬದಿಗಳಲ್ಲಿ ನಾಲ್ಕು ಕುರ್ಚಿಗಳು. ಕಿಟಕಿಯ ಬಳಿ ಹೊರಗೇನನ್ನೋ ನೋಡುತ್ತ ಕೂತಿರುವ ಒಬ್ಬ ಮನುಷ್ಯ. ಅರೆತೋಳಿನ ಷರ್ಟು ತೊಟ್ಟುಕೊಂಡ, ಕಚ್ಚೆಪಂಚೆ ಉಟ್ಟುಕೊಂಡ ಆತ ಹಾಗೇ ತುಂಬ ಹೊತ್ತು ಕೂತಿದ್ದಾನೆ ಎಂದು ಅನ್ನಿಸುವ ಹೊತ್ತಿಗೆ ಮೇಲೆದ್ದು ಹಾಲಿನಲ್ಲಿ ಶತಪಥ ತಿರುಗತೊಡಗಿದ. ಹಾಗೆ ತಿರುಗುತ್ತಿರುವಾಗ ಒಮ್ಮೊಮ್ಮೆ ಕೈಯಿಂದ ಹಣೆ ಚಚ್ಚಿಕೊಳ್ಳುತ್ತಿದ್ದ; ತಿರುಗಿದ್ದು ಸಾಕು ಅನ್ನಿಸಿದ್ದೇ ಮತ್ತೆ ಅದೇ ಕುರ್ಚಿಯಲ್ಲಿ ಕುಕ್ಕರಿಸುತ್ತಿದ್ದ. 'ಇದೊಂದು ಪ್ಯಾನ್ ಶಾಟ್' ಅಂದರು ಧನಂಜಯ.

ರಾತ್ರಿ ತುಂಬ ಹೊತ್ತಾದ ಮೇಲೊಂದು ಸದ್ದು ಗಾಢನಿದ್ರೆಯಲ್ಲಿದ್ದ ಕಮಲಾಕ್ಷಿಯನ್ನು ಎಚ್ಚರಿಸಿತು. ಯಾವ ಸದ್ದು ಅಂತ ಗೊತ್ತಾಗಲಿಲ್ಲ. ಅವಳು ಧಡಕ್ಕೆಂದು ಎದ್ದುಕೂತು ಕತ್ತಲೆ ಕವಿದ ರೂಮಿನಲ್ಲಿ ಕಣ್ಣಾಡಿಸಿದಳು. ನಿದ್ರೆಗೆ ಜಾರುವುದಕ್ಕೆ ಮುಂಚೆ ದೀಪಗಳಿದ್ದವು. ಈಗ ಒಂದು ಬಲ್ಬೂ ಉರಿಯುತ್ತಿಲ್ಲ. ತನ್ನನ್ನು ಎಚ್ಚರಗೊಳಿಸಿದ್ದು ಯಾರು, ಏನು ಎಂದು ಯೋಚಿಸಿದಳು. ಮನೆಯೊಳಕ್ಕೆ ಬಂದದ್ದಾದರೂ ಏನು? ಗಡಿಯಾರ ರಾತ್ರಿ ಎರಡೂವರೆ ಗಂಟೆ ತೋರಿಸುತ್ತಿತ್ತು. ಅಡುಗೆ ಮನೆಯಲ್ಲೇನೋ ಸಪ್ಪಳ. ಹೋಗಿ ನೋಡಿದರೆ ಏನೂ ಕಾಣಲಿಲ್ಲ. ದೀಪವಿಲ್ಲದ ಸಂದರ್ಭಗಳಲ್ಲಿ ಅವಳು ಸಾಮಾನ್ಯವಾಗಿ ಎಂಥ ಸದ್ದುಗಳಿಗೆ ಹೊಂದಿಕೊಳ್ಳುತ್ತಿದ್ದಳೋ ಅಂಥ ಸದ್ದುಗಳೂ ಇಲ್ಲ.

ಸೊಗಸಾದ ಲಾಂಗ್ ಶಾಟ್. ಎಡಕ್ಕೆ ಒಂದು ತೆಂಗಿನಮರ, ಬಲಗಡೆಗಿದ್ದ ಮನೆಯ ಉದ್ದನೆಯ ನೆರಳು, ಆ ನೆರಳನ್ನೇ ಹಾದುಬರುತ್ತಿರುವ ಒಂದು